# ಸಾಮಾಜಿಕ ಎಚ್ಚರವಿರಲಿ

> ಅತ್ಯಾಧುನಿಕ ಸಂಶೋಧನೆಗಳ ಮೂಲಕ ಆವಿಷ್ಕಾರಗೊಂಡಿರುವ ಎಷ್ಟೋ ಪರಿಹಾರ ಸಾಧನಗಳು ಗ್ರಾಮೀಣ ಪ್ರದೇಶಕ್ಕೆ ತಲುಪುವುದೇ ಇಲ್ಲ. ನಗರಗಳಲ್ಲಿ ಇಂತಹ ಪರಿಹಾರ ಸೌಲಭ್ಯಗಳು ಸಿಗುತ್ತಿದ್ದರೂ ಅದು ದುಬಾರಿ ಬೆಲೆಯಿಂದಾಗಿ ಎಲ್ಲರ ಕೈಗೆ ಎಟಕುತ್ತಿಲ್ಲ.

ಅಂಗವೈಕಲ್ಯ ಹುಟ್ಟಿನಿಂದ ಬಂದಿರಲಿ ಅಥವಾ ಬೇರೆ ಯಾವುದೇ ಕಾರಣದಿಂದ ಬಂದಿರಲಿ, ಅದು ಇವತ್ತು ನಮ್ಮ ಇಡೀ ಸಮಾಜದ ಸಮಸ್ಯೆ; ಕೇವಲ ಆ ವ್ಯಕ್ತಿಯ ಸಮಸ್ಯೆಯಲ್ಲ. ಜಗತ್ತಿನಾದ್ಯಂತ ಶೇಕಡಾ 10ರಿಂದ 15ರಷ್ಟು ಜನರು ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ ಎನ್ನುವುದು ಈ ಸಮಸ್ಯೆಯನ್ನು ನಾವು ನೋಡಬೇಕಾದ ದೃಷ್ಟಿಕೋನವನ್ನು ಬದಲಿಸಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಿದೆ. 2013ರ ಅಂಕಿ ಅಂಶಗಳನ್ನು ಗಮನಿಸಿದರೆ, ವಿಶ್ವದಾದ್ಯಂತ 84.1 ಕೋಟಿ ಜನರು ಒಂದಲ್ಲ ಒಂದು ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ. ಆ ಬಳಿಕ ಈ ಪ್ರಮಾಣ ಹೆಚ್ಚಾಗಿರುವ ಸಾಧ್ಯತೆಗಳೇ ಹೆಚ್ಚು. 2011ರ ಜನಗಣತಿ ಆಧರಿಸಿ 2015ರಲ್ಲಿ ಪ್ರಕಟವಾದ ಅಂಕಿ ಅಂಶಗಳ ಪ್ರಕಾರ, ನಮ್ಮ ದೇಶದಲ್ಲೇ 2.68 ಕೋಟಿ ಜನರು ಒಂದಲ್ಲ ಒಂದು ರೀತಿಯ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ ಅಂಗವಿಕಲರ ಸಂಖ್ಯೆ ಶೇಕಡಾ 18ರಷ್ಟು ಏರಿಕೆಯಾಗಿದೆ, ಇವರಲ್ಲಿ ಶೇ.70ರಷ್ಟು ಮಂದಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎನ್ನುವುದು ಗೊತ್ತಾಗಿದೆ.

ಕುರುಡುತನ, ಕಿವುಡುತನ, ಕೈ ಕಾಲು ಊನವಾಗಿರುವುದು, ಬುದ್ಧಿಮಾಂದ್ಯತೆ ಮುಂತಾಗಿ ಹಲವು ಸಮಸ್ಯೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಎದುರಿಸುವುದು ಬಹಳ ಕಷ್ಟದ ಕೆಲಸ. ಅತ್ಯಾಧುನಿಕ ಸಂಶೋಧನೆಗಳ ಮೂಲಕ ಆವಿಷ್ಕಾರಗೊಂಡಿರುವ ಎಷ್ಟೋ ಪರಿಹಾರ ಸಾಧನಗಳು ಗ್ರಾಮೀಣ ಪ್ರದೇಶಕ್ಕೆ ತಲುಪುವುದೇ ಇಲ್ಲ. ನಗರಗಳಲ್ಲಿ ಇಂತಹ ಪರಿಹಾರ ಸೌಲಭ್ಯಗಳು ಸಿಗುತ್ತಿದ್ದರೂ ಅದು ದುಬಾರಿ ಬೆಲೆಯಿಂದಾಗಿ ಎಲ್ಲರ ಕೈಗೆ ಎಟಕುತ್ತಿಲ್ಲ.

ಬಹುತೇಕ ಪ್ರಕರಣಗಳಲ್ಲಿ ಅಂಗವೈಕಲ್ಯ ಬಡತನದ ಪರಿಣಾಮವೂ ಹೌದು, ಕಾರಣವೂ ಹೌದು. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ತಮ್ಮ ಬಜೆಟ್‌ನ ಶೇ. 3ರಷ್ಟು ಹಣವನ್ನು ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ಇಡಬೇಕೆಂಬ ನಿಯಮವಿದೆ. ಆದರೆ ಇದನ್ನು ಬಹುತೇಕ ಸರ್ಕಾರಗಳು ಕಟ್ಟುನಿಟ್ಟಾಗಿ ಪಾಲಿಸುತ್ತಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಹೀಗೆ ಮೀಸಲಿಟ್ಟ ಹಣ ಅನ್ಯ ಉದ್ದೇಶಗಳಿಗೆ ಬಳಕೆಯಾಗುವುದೇ ಹೆಚ್ಚು.  ಸರ್ಕಾರಿ ಉದ್ಯೋಗಗಳಲ್ಲಿ ಶೇಕಡಾ 3ರಷ್ಟು ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಿಡಬೇಕು. ಆದರೆ ಈ ಉದ್ಯೋಗಗಳನ್ನು ಗಳಿಸಲು ನೆರವಾಗುವ ವಾತಾವರಣವಿಲ್ಲ.

ಹಾಗೆ ನೋಡಿದರೆ, ಅಂಗವಿಕಲರನ್ನು ಹೆಚ್ಚು ಜತನದಿಂದ ಕಾಪಾಡಬೇಕು ಎಂಬ ಅರಿವು ಈಗಿನ ಸಮಾಜದಲ್ಲಿ ಹೆಚ್ಚಾಗಿದೆ. ಅವರ ಕಲ್ಯಾಣ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಆಗುತ್ತಿಲ್ಲ. ಸರ್ಕಾರದ ಸೌಲಭ್ಯಗಳನ್ನು ಪಡೆಯುವ ವಿಧಾನಗಳನ್ನು ಸರಳಗೊಳಿಸಬೇಕಿದೆ. ಮುಂದುವರಿದ ದೇಶಗಳಲ್ಲಿ ಸಮಾಜವು ಈ ನಿಟ್ಟಿನಲ್ಲಿ ಹೆಚ್ಚು ಸಾಮಾಜಿಕ ಅರಿವು ಹೊಂದಿದೆ. ಏಷ್ಯಾದ ಮತ್ತು ಆಫ್ರಿಕಾದ ದೇಶಗಳಲ್ಲಿ ಅರಿವು ಕಡಿಮೆ. ಶಿಕ್ಷಣ, ಉದ್ಯೋಗ, ನಾಗರಿಕ ಬದುಕಿನ ವಿವಿಧ ಸ್ತರಗಳಲ್ಲಿ ಅಂಗವಿಕಲರು ಸರಾಗವಾಗಿ ಪಾಲ್ಗೊಳ್ಳುವಂತೆ ಮಾಡುವಲ್ಲಿ ಇವತ್ತು ತಂತ್ರಜ್ಞಾನ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಊರುಗೋಲು, ಶ್ರವಣ ಸಾಧನ, ಎಫ್‌ಎಂ ವ್ಯವಸ್ಥೆ, ಕೃತಕ ಅಂಗಾಂಗಗಳ ಅಳವಡಿಕೆ, ಬ್ರೈಲ್ ಟೈಪ್‌ರೈಟರ್ ಅಥವಾ ಕೀ ಬೋರ್ಡ್, ದೇಹಕ್ಕೆ ಅಂಟಿಸಿಕೊಳ್ಳಬಹುದಾದ ಉಪಕರಣಗಳು, ರ್‍ಯಾಂಪ್‌ಗಳಲ್ಲಿ ಸರಾಗವಾಗಿ ಚಲಿಸುವ ವೀಲ್‌ಚೇರ್‌ಗಳು ಮಾರುಕಟ್ಟೆಗೆ ಬಂದು ಹಲವು ವರ್ಷಗಳೇ ಕಳೆದಿವೆ. ಕುರುಡರು ಯಾರದೇ ಸಹಾಯವಿಲ್ಲದೆ ಬಟ್ಟೆ ಬಟನ್ ಹಾಕಲು ಅಥವಾ ಶೂಗಳನ್ನು ಧರಿಸಲು ನೆರವಾಗುವ ಪುಟ್ಟ ಉಪಕರಣಗಳೂ ಇವೆ. ಆದರೆ ಇಂತಹ ಉಪಕರಣಗಳು ಸಿಗುತ್ತಿವೆ ಎನ್ನುವ ಕನಿಷ್ಠ ಮಾಹಿತಿಯೂ ಗ್ರಾಮೀಣರಿಗೆ ಲಭ್ಯವಿಲ್ಲ. ಈ ಉಪಕರಣಗಳ ಬಳಕೆಗೆ ಪೂರಕವಾದ ಮೂಲಸೌಲಭ್ಯಗಳೂ ನಮ್ಮಲ್ಲಿ ಇಲ್ಲ. ರಸ್ತೆ, ಫುಟ್‌ಪಾತ್, ಬೃಹತ್ ಕಟ್ಟಡಗಳನ್ನು ರೂಪಿಸುವಾಗ ಅಂಗವಿಕಲರ ಅಗತ್ಯಗಳನ್ನು ಕಡ್ಡಾಯವಾಗಿ ಪರಿಗಣಿಸಬೇಕು. ಈ ಸೌಲಭ್ಯಗಳ ಬಳಕೆಗೆ ಅಂಗವಿಕಲರಿಗೆ ಸೂಕ್ತ ತರಬೇತಿ ನೀಡುವ ವ್ಯವಸ್ಥೆಯೂ ಇಲ್ಲ. ಹೇಗಾದರೂ ಹಣ ಹೊಂದಿಸಿ ಸಲಕರಣೆಗಳನ್ನು ಪಡೆಯುವ ಅಂಗವಿಕಲರಿಗೆ ಅವುಗಳ ರಿಪೇರಿಯ ಸೌಲಭ್ಯವೂ ಸುಲಭದಲ್ಲಿ ಸಿಗುತ್ತಿಲ್ಲ. ಮನೆಗಳನ್ನು ನಿರ್ಮಿಸುವಾಗ ಅದರಲ್ಲಿನ ಸೌಲಭ್ಯಗಳು ಅಂಗವಿಕಲರಿಗೂ ಸಮಾನವಾಗಿ ಲಭ್ಯವಾಗಬೇಕು ಎನ್ನುವ ಕನಿಷ್ಠ ಪ್ರಜ್ಞೆಯೂ ನಮ್ಮಲ್ಲಿಲ್ಲ.

ಇದೆಲ್ಲವನ್ನೂ ಕೇವಲ ಕಾನೂನಿನ ಬಲದಿಂದ ಒದಗಿಸಲಾಗದು. ನಮ್ಮ ಸಮಾಜ ಅಂಗವಿಕಲರ ಬದುಕುವ ಹಕ್ಕುಗಳನ್ನು ಗೌರವಿಸಿ, ಅವುಗಳ ಪಾಲನೆ ತನ್ನ ಕರ್ತವ್ಯವೆಂದೇ ಭಾವಿಸದಿದ್ದರೆ ಇದಕ್ಕೆ ಪರಿಹಾರ ಸುಲಭವಿಲ್ಲ. 'ಎಲ್ಲ ಜನರಿಗೂ ಬದುಕುವ ಮತ್ತು ಸರಿಯಾಗಿ ಬದುಕುವ ಹಕ್ಕು ಇದೆ' ಎನ್ನುವುದನ್ನು ನಮ್ಮ ಸಮಾಜ ಅರಿತು ನಡೆಯಬೇಕಿದೆ. ಅಂಗವಿಕಲರ ಸೌಖ್ಯ ನೋಡಿಕೊಳ್ಳುವುದು, ಎಲ್ಲ ಅಂಗಗಳೂ ಸರಿಯಾಗಿರುವವರ ಆದ್ಯ ಕರ್ತವ್ಯ ಎನ್ನುವ ಮನೋಭಾವನೆ ನಮ್ಮಲ್ಲಿ ಬೆಳೆಯಬೇಕು. ಪ್ರಗತಿಯ ನಾಗಾಲೋಟದಲ್ಲಿ ಯಾರ ಅಂಗ ಯಾವಾಗ ಊನವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇವತ್ತು ಇದೆ ಎನ್ನುವುದನ್ನು ಎಲ್ಲರೂ ಮನಗಾಣಬೇಕು.

■ **ಬಿ.ಎಂ.ಹನೀಫ್**



ಈಶ್ವರ್